ಜಮಖಾನಾ ತಗೊಂಡು ಹಾಲ್‌ನಲ್ಲಿ ಮಲಗಿದ. ಬಾಳೊತ್ತಿಗೆ ನಿದ್ದೆ ಹತ್ತಿತು. ಈಗ ನೋಡಿದರೆ ಚುಮು ಚುಮು ಬೆಳಕು ಹರಿಯುವ ಹೊತ್ತಿಗೇ ಬಾಗಲಾ ಬಡಿವ ಸಪ್ಪಳ.

ಸಿಡಿಮಿಡಿಗೊಳ್ಳುತ್ತಾ ಬಾಗಲಾ ತೆಗೆದರೆ ಎದುರಿಗೆ ದೈನೇಸಿಯಲ್ಲಿ ನಿಂತಿರುವ ಸಲೀಮನ ತಂದೆ ಬಿಳಿ ಕುರುಚಲು ಗಡ್ಡದ ಇಮಾಮಸಾಬ. ಏನು ಎಂಬಂತೆ ನೋಡಿದ. 'ತುಮಾರಾ ಭೈಯ್ಯಾ ಸಲೀಮಕಾ ತಬೀಯತ್ ಬಹುತ್ ಖರಾಬ್ ಹುವಾ ಹೈ. ಮೈ ಕೆಂಡ ಆಗೇತಿ. ಏನೇನೋ ರಾತ್ರಿ ಬಡಬಡಿಸ್ತಿದ್ದ. ನನ್ನ ಬೀಬಿ ಹೌಹಾರಿ ಕೂತಾಳ'.

'ಸದ್ಯ ಬಂದೆ, ನೀವು ನಡೀರಿ'.

ಸಲೀಮ ಗ್ಯಾರೇಜಿನಲ್ಲಿ ಗಣೇಶನ ಬಲಗೈ ಬಂಟನಾಗಿದ್ದ. ಅವ ಆಲ್‌ರೌಂಡರ್ ಕೆಲಸಗಾರ. ಅಲ್ಮೇರಾ ಮಾಡೋದಿರಲಿ, ಕಾಟ್ ಮಾಡೋದಿರಲಿ, ಹಾಗೇ ಎಂಗಲ್ಸ್ ಹಾಕಿ ತಗಡಿನ ಷೀಟ್ ಹೊದಿಸೋದಿರಲಿ ಚಕ ಚಕ ಅಂತ ಕೆಲಸ ಮಾಡತಿದ್ದ. ಕಾಲಾಗ ಬಾಳ ಹಗೂರ ಇದ್ದ. ಹೊದಿಸಿದ ಷೀಟುಗಳ ಮ್ಯಾಲೆ ನಟ್ಟು ಬೋಲ್ಟು ಬಿಗೀತಾ ಅಡ್ಡಾಡತಾ ಇದ್ರ ಅವನನ್ನ ನೋಡಬೇಕು, ಗಾಳ್ಯಾಗ ಪತಂಗ ಸುಳಿದಾಡದಂಗ ಅನಿಸ್ತಿತ್ತು.

ಗ್ಯಾರೇಜು ಹತ್ತು ವರ್ಷದ ಹಿಂದೆ ಸುರು ಆಗೋ ಹೊತ್ತಿಗೆ ಸಲೀಮ ಬಂದಿದ್ದ. ಆಗ ಹದಿನಾರು ವರ್ಷದ ಹುಡುಗ. ಅವ ಕೆಲಸ ಕಲಕೋತ ಎಕ್ಸ್‌ಪರ್ಟ್ ಆಗಿಬಿಟ್ಟ. ಜವಾಬ್ದಾರಿಯಿಂದ ಕೆಲಸ ಮಾಡತಿದ್ದ. ಎಲ್ಲಾರನೂ ಹಚ್ಚಿಕೋತಿದ್ದ. ಗಣೇಶನನ್ನ ಭೈಯ್ಯಾ ಅಂತ ಕರೀತಿದ್ದ. ಈಗ ಕೆಲಸಗಾರರು ಕೆಲಸ ಬಿಟ್ಟು ತಮ್ಮ ಹಳ್ಳಿಗಳಿಗೆ ಹೋಗಿ ಬಿಟ್ಟದ್ದರೂ, ಇದೇ ಊರಲ್ಲಿದ್ದ ಸಲೀಮ ಮಾತ್ರ ತಪ್ಪದೇ ಬರತಿದ್ದ. ಈಗ್ಗೆ ನಾಕು ದಿನಗಳಿಂದ ಅವನೂ ಇಲ್ಲ. ಅವನಿಗೆ ನೆಗಡಿ- ಕೆಮ್ಮು ಸುರು ಆತು. 'ಎರಡು ದಿನಾ ರೆಸ್ಟು ಮಾಡು, ಕೆಲಸಕ್ಕ ಬರಬ್ಯಾಡ' ಅಂದಿದ್ದ. ಆದ್ರೂ ಮರು ದಿನಾನೂ ಬಂದ.

'ಯಾಕೋ ಬಂದೀ?'

'ಇಲ್ಲಾ ಭೈಯ್ಯಾ, ಮಲಗಿದ್ರ ಹಾಗೇ ಮಲಗಬೇಕನಿಸ್ತೈತಿ. ಸೊಂಟ ಕಾಡೆ ಕುಡದು ಬಂದೀನಿ.'

'ಇದು ನಾಜೂಕಿನ ಕಾಲಪಾ. ರೆಸ್ಟು ಮಾಡಬೇಕಿತ್ತು. ಸರಿ, ಕೆಲಸಾ ಮಾಡು' ಅಂದು ಅವನಿಗೆ ಮಾಸ್ಕ್ ಕೊಟ್ಟಿದ್ದ. ಆದರೆ ಅವನಿಗೆ ಸುಸ್ತಾಗಿತ್ತು. 'ನಾಳೆ ಬರಬ್ಯಾಡ' ಅಂತ ತಾಕೀತು ಮಾಡಿದ. ಅವ ಬರಲಿಲ್ಲ. ಅವ ರೆಸ್ಟು ಮಾಡ್ಯಾನ ಅನಕೊಂಡಿದ್ದ. ಆದ್ರ ಈಗ ನೋಡಿದ್ರ ಅವನಪ್ಪ ಗಾಬರಿ ಆಗಿ ಬಂದಾನ ಅನ್ಕೊಂಡು ಮಾಸ್ಕ್ ಹಾಕ್ಕೊಂಡು ಅವನ ಮನಿ ಕಡೀಗೆ ಸ್ಕೂಟರು ಹತಗೊಂಡು ಹೊಂಟ.

ಸಲೀಮ ನಿತ್ರಾಣಗೊಂಡಿದ್ದ. 'ಅವ್ವ ಅಪ್ಪ ಅಂಜಿಕೊಂಡಾರ, ನನಗೂ ಅಂಜಸ್ತಾರ. ನನಗೇನೂ ಆಗಿಲ್ಲ' ಅಂತೆಲ್ಲ ಮಾತಾಡಿದ.

'ಇರಲಿ, ಆದ್ರೂ ಸರಕಾರಿ ಆಸ್ಪತ್ರೆಯಲ್ಲಿ ತೋರಿಸಿ ಬಿಡಾಣ. ಸ್ಕೂಟರು ಹತ್ತಲಿಕ್ಕೆ ಆಗತ್ತೋ ಇಲ್ಲೋ.'

'ಕೂಡತೀನಿ.'

ಆಸ್ಪತ್ರೆಯಲ್ಲಿ ಗಣೇಶ ತನಗೆ ಪರಿಚಿತ ಡಾ. ಸುರೇಶರ ಬಳಿಗೆ ಬಂದು ವಿನಂತಿಸಿಕೊಂಡ. ಅವರಿಗೆ ಈ ಹಿಂದೆ ಅವರ ಅಗತ್ಯಗಳಿಗೆ ಅನುಗುಣವಾಗಿ ಅಲ್ಮೇರಾಗಳನ್ನ ಮಾಡಿಕೊಟ್ಟಿದ್ದ. ಅವರು ಬಹಳ ಇಷ್ಟಪಟ್ಟಿದ್ದರು. ಅವರೊಬ್ಬ ನೀತಿ ನಿಯತ್ತಿನ ಡಾಕ್ಟರ್ ಆಗಿ ಹೆಸರಾದವರು ಕೂಡ. ಸಲೀಮನ ರಕ್ತಪರೀಕ್ಷೆ ಮಾಡಿದಾಗ 'ಪಾಸಿಟಿವ್ ಬಂದಿದೆ, ಕೊರೊನಾ ವಾರ್ಡಿಗೆ ಸೇರಿಸಬೇಕು' ಎಂದರು. ಏನೆಲ್ಲ ಖಟಪಿಟ ಮಾಡಿದರೂ ಬೆಡ್ಡು ಸಿಗಲು ರಾತ್ರಿಯೇ ಆಯಿತು. ಅವನಿಗೆ ಹೋಟಲಿನಿಂದ ಇಡ್ಲಿ ತಂದು ಕೊಟ್ಟ. 'ಗಟ್ಟಿಯಾಗಿರು, ಆರಾಮ ಆಗತೀದಿ' ಅಂತ ಹೇಳಿದ. ಸ್ವತಃ ಡಾಕ್ಟರ್ ಬಂದು ಸಲೀಮನಿಗೆ 'ಧೈರ್ಯ ಇರಲಿ, ಆರಾಮ ಆಗತೀದಿ' ಅಂತ ಭರವಸೆಯ ಮಾತು ಹೇಳಿದರು. ಸಲೀಮ ನಿಧಾನವಾಗಿ ಡಾಕ್ಟರ್‌ಗೆ ಎರಡೂ ಕೈ ಜೋಡಿಸಿದ. ಅವ ಈವರೆಗೆ ಧೈರ್ಯವಾಗೇ ಇದ್ದ. ಈಗ ಎಲ್ಲಾರೂ ಮಾತಾಡೋ ಧಾಟಿಯಿಂದ ಅವನಿಗೆ ಭಯವಾಯ್ತು. ಅವನು ಆರ್ತನಾಗಿ ಗಣೇಶನ ಕಡೀಗೆ ನೋಡಿದ. ಅವ ನೋಡಲಾಗದೆ ಮುಖಾ ಹೊರಳಿಸಿದ.

ಸಲೀಮನ ಮನಿಗೆ ಬಂದು ಅವನ ತಂದಿತಾಯಿ ಕಂಡು 'ಆರಾಮ ಆಗತಾನ ಅಂತ ಡಾಕ್ಟರು ಹೇಳ್ಯಾರ, ಮೂರು ದಿನ ಅಲ್ಲೇ ಇರಲಿ ಅಂದಾರ' ಅಂತ ಸಮಾಧಾನ ಹೇಳಿದ.

'ನಿಮ್ಮ ಕಾಳಜಿ ಇರಲಿ, ಎಲ್ಲಾ ನಿಮ್ಮನ್ನs ಕೂಡೈತಿ' ಅಂತ ಕೈ ಮುಗದ.